ಮಂಡಲಿಯೋ, ಅಥವಾ ಭೂ ಅನ್ಯಾಯ ಮಂಡಲಿಯೋ, ಅಂತೂ ಈ ಮಂಡಲಿಯಲ್ಲಿ ಅಂದರೆ ಲ್ಯಾಂಡ್ ಟ್ರಬ್ಯೂನಲ್‌ನಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ ನನ್ನ ಅನುಭವದಲ್ಲಿ ಈ ಬಗ್ಗೆ ಹೇಳುವುದಾದರೆ ಇನ್ನತ್ತು ಸಭೆಯಮುಂದೆ ಏನೊಂದು ವಿಚಾರವನ್ನು ತಂದಿದ್ದೀರಿ ಇದನ್ನು ಡ್ರಾಪ್ ಮಾಡಿದರೆ ಒಳ್ಳೆಯದು. ನಮ್ಮ ಕಡೆ "ಅಗಲ್‌ಗಿರ, ಪೀಛೆ ಹುಷಾರ್" ಎಂದು ಒಂದು ಗಾದೆ ಮಾತನ್ನು ಹೇಳುತ್ತಾರೆ

Mr. Deputy Speaker.--The House now stands adjourned to meet again at 2 O' clock.

(The House adjourned at One Minute past one of the Clock to meet again at Two of the clock in the afternoon.)

2-P. M.

ಸಭೆಯು ಪುನಃ 2 ಗಂಟೆ 10 ನಿಮಿಷಗಳಿಗೆ ಪ್ರಾರಂಭವಾಯಿತು

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸಿದ್ಧ ರಾಮೇಶ್ವರವರ ಕೊಲೆಯ ಸಿ. ಬಿ. ಐ. ತನಿಖೆ ಬಗ್ಗೆ ಮುಖ್ಯಮಂತ್ರಿಯವರ ಹೇಳಿಕೆ

ಶ್ರೀ ರಾಮಕೃಷ್ಣಹೆಗಡೆ.-- ಮಾನ್ಯ ಅಧ್ಯಕ್ಷರೇ, ನೆನ್ನೆದಿನಸ ಈ ಸದನದಲ್ಲಿ ಗುಲ್ಬರ್ಗದ ಕ್ರಾಂತ ಪತ್ರಿಕೆಯ ಸಂಪಾದಕರಾದ ಶ್ರೀ ಸಿದ್ಧ ರಾಮೇಶ್ವರ್ ಅವರ ಕೊಲೆ ವಿಚಾರ ಇಲ್ಲಿ ಚರ್ಚೆಯಾಯಿತು. ಆಗ ಇಲ್ಲಿ ಕೆಲವು ಮಾನ್ಯ ಸದಸ್ಯರು ಇದರ ತನಿಖೆಗೆ ಈ ಸದನದ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಆಗ್ರಹಪಡಿಸಿದರು ಶ್ರೀ ಮಾನ್ ಒಡೆಯರಾಜ್ ಅವರು ಸಿ ಬಿ.ಐ ಮುಖಾಂತರು ಇದನ್ನು ತನಿಖೆ ನೂಡಿಸಬೇಕೆಂದು ಸೂಚಿಸಿದರು. ಈಗಾಗಲೇ ನಾನು ಸಿ ಒ ಡಿ. ತನಿಖೆಗೆ ಆರ್ಡರ್ ಮಾಡಿದ್ದೇನೆ. ಅದರೂ ಮಾನ್ಯ ಸದಸ್ಯರ ಒಂದು ಸೂಚನೆಯನ್ನು ಗಮನಿಸಿ ಇದರಲ್ಲಿ ಯಾವುದೇ ತರಹದ ಪ್ರಭಾವ ಅಥವಾ ಪಕ್ಷ ಪಾತಕ್ಕೆ ಒಳಗಾಗದೆ ತನಿಖೆ ನಡೆಯಬೇಕು ಎಂಬ ಉದ್ದೇಶದಿಂದ ಸಿ ಬಿ.ಐ. ಮೂಲಕ ತನಿಖೆಯಾಗಬೇಕೆಂದು ನಮ್ಮ ಸರ್ಕಾರ ತೀರ್ಮಾನಿಸಿದೆ. ಈ ಬಗ್ಗೆ ನಾನು ಕೇಂದ್ರಸರ್ಕಾರಕ್ಕೆ ಬರೆಯುತ್ತೇನೆ

Sri G. P. Vodeyaraj.--I congratulate the Hon'ble Chief Minister.

Sri Ramakrishna Hegde --Thank you.

ಶ್ರೀ ಧರ್ಮಸಿಂಗ್.-- ನಾರಾಯಣ್‌ಸಿಂಗ್ ಇದರ ತನಿಖೆಗೆ ಹೌಸ್-ಕಮಿಟಿ ರಚನೆಯಾಗಬೇಕೆಂದು ಬೆಳಿಗ್ಗೆ ನಾನು, ಶ್ರೀ ಮಲ್ಲಿಕಾರ್ಜುನ ಖಾರ್ಗೆ ಅವರು ಹಾಗೂ ಶ್ರೀಒಡೆಯರಾಜ್ ಅವರು ಕೇಳಿ ಕೊಂಡಾಗ ಮಾನ್ಯ ಅಧ್ಯಕ್ಷರು ಈ ಬಗ್ಗೆ ಚರ್ಚೆ ಮಾಡಲುತಮ್ಮ ಛೇಂಬರ್‌ಗೆ ಆಹ್ವಾನಿಸಿದರು. ಅದರಂತೆ ಮುಖ್ಯಮಂತ್ರಿಗಳು ಮತ್ತು ವಿರೋಧಪಕ್ಷದ ನಾಯಕರು ಅಧ್ಯಕ್ಷರ ಛೇಂಬರ್‌ನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದರು. ಈಗ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಯಾವುದೇ ಸಂಶಯವಿಲ್ಲದ ರೀತಿಯಲ್ಲಿ ತನಿಖೆ ಮಾಡಲು ಇದನ್ನು ಸಿ.ಬಿ.ಐ.ಗೆ ವಹಿಸಲು ಒಪ್ಪಿದ್ದಾರೆ ಅದಕ್ಕಾಗಿ ನಾನೂ ಕೂಡ ಅವರಿಗೆ ತಮ್ಮ ಮೂಲಕ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

V. Financial Business

(i) Supplementary Demands For The Year 1983-84

Discussion And Voting of Supplementary Demands For Grants For the Year 1983 84.

Mr. Deputy Speaker.-- Hon'ble Chief Minister to move the motion.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).--ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸಿನ ಮೇರೆಗೆ ಈ ಕೆಳಗಿನ ಪ್ರಸ್ತಾಪಗಳನ್ನು ಮಂಡಿಸುತ್ತಿದ್ದೇನೆ.

1) 1984 ರ ಮಾರ್ಚ್ 31ರ ಅಂತ್ಯದೊಳಗಾಗಿ "ಕೃಷಿಗೆ ಸಂಬಂದಿಸಿದ (ತೋಟಗಾರಿಗೆ ಮತ್ತು ಕ್ಷಾನು ಪೀಡಿತ ಪ್ರದೇಶಗಳ ಕಾರ್ಯಕ್ರಮನನ್ನು ಹೊರತುಪಡಿಸಿ," ವೆಚ್ಚಗಳ ಬಗ್ಗೆ ಸಂದಾಯ ಮಾಡ